# COVID-19
# ವಯಕ್ತಿಕ ಪ್ರತ್ಯೇಕತೆಯಲ್ಲಿ ಬದಲಾವಣೆ

## ನಿಮ್ಮ COVID-19 ಪರೀಕ್ಷೆ ಪಾಸಿಟಿವ್ ಎಂದು ಬಂದಿದ್ದರೆ ನೀವು ವಯಕ್ತಿಕ ಪ್ರತ್ಯೇಕತೆಯನ್ನು ಪಾಲಿಸಬೇಕಿಲ್ಲ.ಆದರೆ ನಿಮ್ಮ ರೋಗಲಕ್ಷಣಗಳು (ಮೂಗು ಸೋರುವಿಕೆ, ಗಂಟಲು ನೋವು, ಕೆಮ್ಮು ಮತ್ತು ಜ್ವರ) ಹೋಗುವವರೆಗೆ ಮನೆಯಲ್ಲೇ ಇರುವುದನ್ನು ಸೂಚಿಸಲಾಗಿದೆ.

ನೀವು ಮನೆಯಿಂದ ಹೊರಗೆ ಹೋಗಲೇಬೇಕಾದಲ್ಲಿ

- ಒಳಾಂಗಣದಲ್ಲಿರುವಾಗ ಮತ್ತು ಸಾರ್ವಜನಿಕ ಸಾರಿಗೆಯನ್ನು ಉಪಯೋಗಿಸುವಾಗ ಮಾಸ್ಕ ಧರಿಸಿ
- ದೊಡ್ಡ ಸಭೆಗಳಿಂದ ಮತ್ತು ಜನಜಂಗುಳಿಯ ಒಳಾಂಗಣಗಳಿಂದ ದೂರವಿರಿ
- ಯಾರು ವಿಪರೀತ ಕಾಯಿಲೆಯಿಂದ ಬಳಲುತ್ತಿದ್ದಾರೋ, ಅಥವಾ ವೃದ್ಧಾಶ್ರಮದಲ್ಲಿದ್ದಾರೋ ಅಥವಾ ವಿಕಲಾಂಗ ಸೇವಾ ಸಂಸ್ಥೆಯಲ್ಲಿದ್ದಾರೋ ಅವರನ್ನು 7 ದಿನಗಳವರೆಗೆ ಭೇಟಿಯಾಗಬೇಡಿ
- ನಿಮ್ಮ ಉದ್ಯೋಗದಾತರಬಳಿ ನೀವು ಯಾವಾಗ ಕೆಲಸಕ್ಕೆ ಮರಳಬೇಕು ಎನ್ನುವಬಗ್ಗೆ ಮಾತನಾಡಿ

ನಿಮಗೆ ನೆಗಡಿ ಅಥವಾ ಶೀತಜ್ವರದ ಲಕ್ಷಣಗಳು ಇದ್ದರೆ ಮನಯಲ್ಲೇ ಇರಿ ಮತ್ತು ಪರೀಕ್ಷೆ ಮಾಡಿಸಿಕೊಳ್ಳಿ. ನೀವು COVID-19 ವೈರಾಣುವಿರೋಧಿ ಔಷಧಕ್ಕೆ ಅರ್ಹರಾಗಿದ್ದರೆ, ರೋಗಲಕ್ಷಣಗಳು ಕಂಡಕೂಡಲೇ ಪರೀಕ್ಷೆ ಮಾಡಿಸಿಕೊಳ್ಳುವುದು ಬಹು ಮುಖ್ಯ. ನಿಮ್ಮ COVID-19 ಪರೀಕ್ಷೆಯು ನೆಗೆಟಿವ್ ಆಗಿದ್ದರೂ ನಿಮ್ಮ ರೋಗಲಕ್ಷಣಗಳು ಕಡಿಮೆಯಾಗುವವರೆಗೆ ನೀವು ನಿಮ್ಮ ಆತ್ಮೀಯರನ್ನು ಹಾಗು ಸಮಾಜವನ್ನು ಸೋಂಕಿನಿಂದ ತಪ್ಪಿಸಲು  ಮನೆಯಲ್ಲೇ ಇರಿ.

ನಿಮ್ಮ ಶೀಘ್ರ ಆಂಟಿಜೆನ್ ಪಾಸಿಟಿವ್ ಫಲಿತಾಂಶವನ್ನು ನೊಂದಾಯಿಸುವುದು ಖಡ್ಡಾಯವಲ್ಲದಿದ್ದರೂ, Service NSW ನಲ್ಲಿ ನೋಂದಾಯಿಸುವಂತೆ NSW Health ಜನರಲ್ಲಿ ಕೇಳಿಕೊಳ್ಳುತ್ತದೆ.

ನಿಮ್ಮ ಆರೋಗ್ಯದ ಕುರಿತು ನಿಮಗೆ ಯಾವುದೇ ಕಾಳಜಿ ಇದ್ದಲ್ಲಿ ಮತ್ತು ಭಾಷೆಯ ಸಹಕಾರ ಬೇಕಿದ್ದಲ್ಲಿ, ಭಾಷಾಂತರ ಮತ್ತು ಅರ್ಥ ವಿವರಣೆ ಸೇವಾ ವಿಭಾಗವನ್ನು (TIS) ದೂರವಾಣಿ ಸಂಖ್ಯೆ 131450 ಮೇಲೆ ಸಂಪರ್ಕಿಸಿ, ಮತ್ತು Healthdirect 1800 022 222 ಸಂಖ್ಯೆಯಮೇಲೆ ವಿಚಾರಿಸಿ.



October 2022 © NSW Health. SHPN (COHS) 220923